ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1991 ಕರ್ನಾಟಕ ಧನ ವಿನಿಯೋಗ (2) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಈಗ ಚುಕ್ಕೆ ಗುರ್ತಿನ ಪ್ರಶ್ನೆಗಳನ್ನು ಶುರು ಮಾಡೋಣ ನಾನು ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಅವಕಾಶ ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸಭಾಧ್ಯಕ್ಷರೆ ಸರ್ಕಾರಕ್ಕೆ ನನ್ನದೊಂದು ಸಲಹೆ ಇದೆ. ಈಗ ಸದನವು 25-9-91, 26-9-91 ಮತ್ತು 27-9-91 ಈ ಮೂರು ದಿನಗಳಲ್ಲಿ ಕುಳಿತುಕೊಂಡು ಬಜೆಟ್ ಬಗ್ಗೆ ಅನೇಕ ವಿಚಾರಗಳ ಬಗ್ಗೆ ನಾವು ಸಾಕಷ್ಟು ಚರ್ಚೆಮಾಡಬೇಕೆಂಬ ಆಸೆ ಇದ್ದರೂ ಆಗಿಲ್ಲ. ಅನೇಕ ವಿಚಾರಗಳಿವೆ ಅದನ್ನು ಈ ಸದನದಲ್ಲಿ ಒಡ್ಡಬೇಕಾಗಿದೆ. ಸರ್ಕಾರದ ಪರವಾಗಿ ಕೆಲವು ಮಸೂದೆಗಳನ್ನು ಸಹಾ ಮಂಡಿಸಿದ್ದಾರೆ. ನಾವು ಅಪ್ರೋಪ್ರಿಯೇಶನ್ ಬಿಲ್ಲನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಬಹುಶಃ ಹನ್ನೆರಡು ಗಂಟೆಗಳ ಕಾಲ ನಾವು ಹೇಳಿದ ಪ್ರಕಾರವಾಗಿ 20ನೇ ತಾರೀಖು ನಾವು ಮಾಡಿಕೊಡುತ್ತೇವೆಂದು ಹೇಳಿದ್ದೇವು ಅದೇ ರೀತಿ ಮಾಡಿಕೊಟ್ಟಿದ್ದೇವೆ. ಸದನವನ್ನು ನಾಳೆದು ದಿವಸಗಳವರೆಗೆ ಮುಂದಕ್ಕೆ ಹಾಕಿ. ಅನೇಕ ವಿಚಾರಗಳ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಅದ್ಯಕ್ಷರು : 25ನೇ ತಾರೀಖು ಸದನದ ಕಾರ್ಯಕಲಾಪಗಳ ಸಮಿತಿ ಕರೆಯುತ್ತೇನೆ ಅವತ್ತಿನ ದಿವಸ ನಡೆಯುತ್ತದೆ. ನೀವು ಇದನ್ನು ಮಂಡಿಸಬಹುದು. ಈಗ ಚುಕ್ಕೆಗುರುತಿನ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು: ಮಾನ್ಯ ಅಧ್ಯಕ್ಷರೆ ದಿನಾಂಕ 20-9-91ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ರಹಿತ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದ. ಕನ್ನಡ ಜಿಲ್ಲೆಯಲ್ಲಿ ಸಿಗಡಿ ಸಂಸ್ಕರಣ ಕೇಂದ್ರ

3690 - ಶ್ರೀ ಆರ್.ಬಿ. ಚೌದರಿ (ಸಿಂಧಗಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ಕೆಎಸ್ಐಐಡಿಸಿ ಸಂಸ್ಥೆಯವರು ಪ್ರಾನ್ ಫಾರಂ ವಿತ್ ಇನ್‌ಹೌಸ್ ಪ್ರೊಸೆಸಿಂಗ್ ಫೆಸಿಲಿಟಿಯ ಮೇರೆಗೆ ಜಂಟಿ ವಲಯದಲ್ಲಿ ಪ್ರಾನ್ ಫಾರಂನ್ನು ಸ್ಥಾಪಿಸಲು ಜಾಹಿರಾತು ನೀಡಿತ್ತೇ?*

ಆ) *ಮಾನ್ಯ ಮುಖ್ಯಮಂತ್ರಿಗಳು ಆಗಸ್ಟ್ 7, 1991 ರಂದು ಪ್ರಕಟಿಸಿರುವ ಕೈಗಾರಿಕಾ ತತ್ವಗಳ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಉದ್ದಿಮೆದಾರರಿಗೆ ಆದ್ಯತೆ ನೀಡಿದೆಯೇ?*

ಇ) *ಈ ಘಟಕವು ಮೀನುಗಾರರ ಉದ್ದಿಮೆಯಾದ ಕಾರಣ, ಮೀನುಗಾರರ ಜನಾಂಗಕ್ಕೆ ಆದ್ಯತೆ ನೀಡಲಾಗಿದೆಯೇ?*

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮದ್ಯಮ ಕೈಗಾರಿಕಾ ಸಚಿವರು):

ಅ) ಹೌದು.

ಆ) ಹೌದು.

ಇ) ಹೌದು.

ಕುಡುಚಿ ಜನಾಂಗದವರ ಬಗ್ಗೆ

3709 - ಶ್ರೀ ರಮಾನಾಥ ರೈ (ಬಂಟ್ವಾಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕನಿಷ್ಟ ಹಿಂದುಳಿದಿರುವ ಕುಡುಚಿ ಜನಾಂಗದ ಜನಜೀವನದ ಬಗ್ಗೆ ಸರ್ಕಾರದಲ್ಲಿ ಮಾಹಿತಿ ದೊರೆಯುವುದೇ?

ಆ) ಮಾಹಿತಿಯದ್ದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಬಹಳಷ್ಟು ಹಿಂದುಳಿದಿರುವ ಈ ಪಂಗಡವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೇ?

ಇ) ಇಲ್ಲವಾದಲ್ಲಿ ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಪರಿಶಿಷ್ಟ ಜಾತಿ ವರ್ಗದ ಪಟ್ಟಿಗೆ ಸೇರಿಸಬೇಕೆಂಬ ಈ ಜನಾಂಗದ ಬೇಡಿಕೆಯನ್ನು ಇದಕ್ಕಾಗಿಯೇ ರಚಿತವಾಗಿರುವ ಸಮಿತಿಯ ಮುಂದೆ ಇಡಲಾಗಿದೆ. ಸಮಿತಿಯ ಶಿಫಾರಸ್ಸಿನ ಮೇಲೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಹೊನ್ನಾಳಿ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

3717 - ಡಾ ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊನ್ನಾಳಿಯ ಸರಕಾರಿ ಆಸ್ಪತ್ರೆಯನ್ನು 50ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿಗಣಿಸಿ ಮೇಲ್ದರ್ಜೆಗೇರಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಶ್ರೀ ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಆಂಗ್ಲೋ ಇಂಡಿಯನ್ ಜನಾಂಗವನ್ನು ಹಿಂದುಳಿದ ಪಟ್ಟಿಗೆ ಸೇರಿಸುವ ಬಗ್ಗೆ

3745 - ಶ್ರೀ ಡೇರಿಕ್ ಎಂ.ಬಿ. ಫುಲನ್ ಷಾ (ನಾಮನಿರ್ದೇಶ ಹೊಂದಿದವರು): ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂರನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಬಗ್ಗೆ ರಚಿಸಲಾಗಿರುವ ಸಂಪುಟ ಉಪ ಸಮಿತಿ ಅಖಿಲ ಭಾರತ ಪ್ರಗತಿಪರ ಆಂಗ್ಲೋ ಇಂಡಿಯನ್ ಸಾಮಾಜಿಕ ಸಾಂಸ್ಕೃತಿಕ ಶೈಕ್ಷಣಿಕ ಮತ್ತು ಆರ್ಥಿಕ ಕಲ್ಯಾಣ ಸಂಘದವರು ಆಂಗ್ಲೋ ಇಂಡಿಯನ್ ಸಮುದಾಯದವರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವ ಸಲುವಾಗಿ ಮನವಿಯನ್ನು ಸಲ್ಲಿಸಿರುತ್ತಾರೆಯೇ?

ಆ) ಸರ್ಕಾರವು ಆಂಗ್ಲೋ ಇಂಡಿಯನರ ಆತಿ ಹಿಂದುಳಿದಿರುವಿಕೆಯನ್ನು ಗಮನಿಸಿದೆಯೇ?